ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ 31–3–1990 ರ ವರೆಗೆ 313 ಎಲ್.ಪಿ. ಕಡತಗಳು ಬಾಕಿ ಇರುತ್ತವೆ.

ಆ) 1987 ರಿಂದ ಮಾರ್ಚ 1990 ರ ವರೆಗೆ ಈ ಕೆಳಕಂಡಂತೆ ನಕ್ಷೆಗಳನ್ನು ಮಂಜೂರು ಮಾಡಲಾಗಿರುತ್ತದೆ.

ವರ್ಷ	ವಾಣಿಜ್ಯ	ವಸತಿ ಮತ್ತು ಇತರೆ	ಒಟ್ಟು
1987–88	320	6041	6361
1988–89	282	6128	6410
1989–90	246	6078	6324

ವಿಷಯ :– ರಾಯಚೂರು ಜಿಲ್ಲೆಯ ನಗರಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 634 (1080)

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ (ಕೊಪ್ಪಳ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರು ಜಿಲ್ಲೆಯ ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ ಹಾಗೂ ರಾಯಚೂರು ನಗರಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆಯೇ ?

ಆ) ಹಾಗಿದ್ದಲ್ಲಿ ಯಾವ ಯೋಜನೆಯಡಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ರಾಯಚೂರು ನಗರದ ಜೊತೆಗಾಗಿ ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ ಪಟ್ಟಣಗಳ ಕುಡಿಯುವ ನೀರಿನ ಯೋಜನೆಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ರಾಯಚೂರು ನಗರ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಿದ್ದು ತಾಂತ್ರಿಕ ಪರಿಶೀಲನೆಯಲ್ಲಿರುತ್ತದೆ. ಸದ್ಯದಲ್ಲಿಯೇ ಮಂಡಲಿಯ ತಾಂತ್ರಿಕ ಮಂಜೂರಾತಿ ದೊರೆತ ನಂತರ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಗೆ ಪರಿಶೀಲಿಸಲಾಗುವುದು.

ಆ) ಮೇಲಿನ ಯೋಜನೆಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ ತಗದುಕೊಂಡಿದ್ದು ಈ ಕೆಳಕಂಡಂತೆ ಹಣವನ್ನು 1990–91 ನೇ ಸಾಲಿಗೆ ಬಿಡುಗಡೆ ಗೊಳಿಸಲಾಗಿದೆ.

1) ಕೊಪ್ಪಳ ರೂ. 10.00 ಲಕ್ಷಗಳು
2) ಗಂಗಾವತಿ ರೂ. 10.00 ಲಕ್ಷಗಳು.
3) ಸಿಂಧನೂರು ರೂ. 20.00 ಲಕ್ಷಗಳು.
4) ಮಾನ್ವಿ ರೂ. 10.00 ಲಕ್ಷಗಳು.
5) ರಾಯಚೂರು ರೂ. —

ವಿಷಯ :– ರಾಜ್ಯಾದ್ಯಂತ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಭರ್ತಿ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 635 (1295)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ?

2) ಸೀನಿಯಾರಿಟಿ ಕಂ ಮೆರಿಟ್ ಆಧ್ಯರ್ಥಿಗಳ ಸಂದರ್ಶನ ಇಲ್ಲದೆ ನೇರವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಸರ್ಕಾರಕ್ಕೆ ತೊಂದರೆ ಏನು ?